ಶ್ರೀ ಅಬ್ದುಲ್‌ನಜೀರ್ ಸಾಬ್ (ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ಯ ಸಚಿವರು).—

ಅ) ಕಂದಾಪುರ ಕ್ಷೇತ್ರದಲ್ಲಿ ೯ ಗ್ರಾಮ ಸೇವಕರುಗಳಿದ್ದಾರೆ.

ಆ) ಇಲ್ಲ, ಪ್ರತಿ ತಾಲ್ಲೂಕನ್ನು ೧೦ ವೃತ್ತಗಳಾಗಿ ಮಂಗಡಿಸಿ ಒಂದು ವೃತ್ತಕ್ಕೆ ಒಬ್ಬ ಗ್ರಾಮ ಸೇವಕರನ್ನು ನೇಮಿಸಲಾಗಿರುತ್ತದೆ. ವೃತ್ತದಲ್ಲಿ ಬರುವ ಎಲ್ಲಾ ಗ್ರಾಮಗಳೂ ಸದರೀ ಗ್ರಾಮ ಸೇವಕನ ವ್ಯಾಪ್ತಿಗೆ ಸೇರುತ್ತದೆ.

ಇ) ಒಂದು.

ದೊಡ್ಡವಾಡ ಗ್ರಾಮದಲ್ಲಿಯ ಕುಡಿಯುವ ನೀರಿನ ಬಗ್ಗೆ

೭೫೭. ಶ್ರೀ ಶಿವಾನಂದ ಹೆಚ್. ಕೌಜಲಗಿ (ಬೈಲಹೊಂಗಲ).—ಮಾನ್ಯ ಗ್ರಾಮೀಣಾಭಿವೃದ್ಧಿ, ವಸತಿ ಮತ್ತು ವಕ್ಫ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಬೆಳಗಾವಿ ಜಿಲ್ಲೆಯ ಬೈಲಹೊಂಗಲ ತಾಲ್ಲೂಕಿನ ದೊಡ್ಡವಾಡ ಗ್ರಾಮದಲ್ಲಿ ಕುಡಿಯುವ ನೀರಿನ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ?

ಆ) ಹಾಗಿದ್ದಲ್ಲಿ ಅದನ್ನು ನಿವಾರಿಸಲು ಸರ್ಕಾರದವರು ಯಾವ ಕ್ರಮವನ್ನು ತೆಗೆದುಕೊಂಡಿರುವರು ?

ಶ್ರೀ ಅಬ್ದುಲ್ ನಜೀರ್‌ಸಾಬ್ (ಗ್ರಾಮೀಣಾಭಿವೃದ್ಧಿ, ವಸತಿ ಮತ್ತು ವಕ್ಫ್ ಮಂತ್ರಿಗಳು).—

ಅ) ಬಂದಿದೆ.

ಆ) ೧೧ ಯಶಸ್ವಿ ಕೊಳವೆ ಬಾವಿಗಳನ್ನು ಕೊರೆಯಲಾಗಿದ್ದು, ಅವುಗಳಿಗೆ ಕೈಪಂಪುಗಳನ್ನು ಅಳವಡಿಸಿ ನೀರು ಸರಬರಾಜು ಮಾಡಲಾಗುತ್ತಿದೆ. ಹಾಗೂ ರಾಷ್ಟ್ರೀಯ ಗ್ರಾಮೀಣ ನೀರು ಸರಬರಾಜು ಯೋಜನೆಯಡಿ ೭.೧೫ ಲಕ್ಷ ರೂ. ಗಳಿಗೆ ಮಂಜೂರಾಗಿದ್ದು ಪೂರ್ಣಗೊಂಡಿರುತ್ತೆ. ದಿನಾಂಕ ೬-೨-೧೯೮೭ ರಿಂದ ನೀರನ್ನು ಸರಬರಾಜು ಮಾಡಲಾಗುತ್ತಿದೆ.

ಬೈಲಹೊಂಗಲ ಒಳಚರಂಡಿಯ ಬಗ್ಗೆ

೭೫೮. ಶ್ರೀ ಶಿವಾನಂದ ಹೆಚ್. ಕೌಜಲಗಿ (ಬೈಲಹೊಂಗಲ). —ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು, ಆಹಾರ ಮತ್ತು ನಾಗರೀಕ ಸರಬರಾಜು ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಬೆಳಗಾಂ ಜಿಲ್ಲೆಯ ಬೈಲಹೊಂಗಲ ನಗರದಲ್ಲಿ ಒಳಚರಂಡಿ ಯೋಜನೆಯ ಕೆಲಸ ಎಂದಿನಿಂದ ಪ್ರಾರಂಭಿಸಲಾಯಿತು ?

ಆ) ಅದು ಅರ್ಧಕ್ಕೆ ನಿಂತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ ?

ಇ) ಅದನ್ನು ಪೂರ್ತಿಗೊಳಿಸಲು ಸರ್ಕಾರದವರು ಯಾವ ಕ್ರಮವನ್ನು ಕೈಗೊಂಡಿರುವರು ?

ಶ್ರೀ ಎ ಲಕ್ಷ್ಮೀಸಾಗರ್ (ಕಾನೂನು, ಸಂಸದೀಯ ವ್ಯವಹಾರಗಳು, ಆಹಾರ ಮತ್ತು ನಾಗರೀಕ ಸರಬರಾಜು ಮಂತ್ರಿಗಳು.)—

ಅ) ೧೯೫೯ರಲ್ಲಿ ಪ್ರಾರಂಭಿಸಲಾಯಿತು.

ಆ) ಬಂದಿದೆ.

ಇ) ಬೈಲಹೊಂಗಲ ಪುರಸಭೆಯ ಕೋರಿಕೆಯ ಮೇರೆಗೆ ಈ ಯೋಜನೆಯನ್ನು ಪೂರ್ತಿಗೊಳಿಸಲು ಸರ್ಕಾರವು ೧೦.೦೦ ಲಕ್ಷ ರೂ.ಗಳನ್ನು ಸಾಲವಾಗಿ ಪುರಸಭೆಗೆ ಮಂಜೂರು ಮಾಡಿ ಅದನ್ನು

ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಲಿಗೆ ಕಾರ್ಯನಿರ್ವಹಿಸಲು ಬಿಡುಗಡೆ ಮಾಡಿದೆ. ಈಗ ಮಂಡಲಿಯು ಕಾರ್ಯ ಪ್ರಾರಂಭಿಸಲು ಕ್ರಮ ತೆಗೆದುಕೊಳ್ಳುತ್ತಿದೆ.

ಚೆನ್ನಪಟ್ಟಣ ತಾಲ್ಲೂಕಿನ ಕನ್ನಸಂದ್ರ ಗ್ರಾಮದಲ್ಲಿ ಇರುವ ಕೊಳವೆ ಬಾವಿಯ ಬಗ್ಗೆ

೯೯೧. ಶ್ರೀ ಸಿ. ಕಣ್ಣನ್ (ಶಾಂತಿನಗರ).—ಮಾನ್ಯ ಗ್ರಾಮೀಣಾಭಿವೃದ್ಧಿ, ವಸತಿ ಹಾಗೂ ವಕ್ಫ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಚೆನ್ನಪಟ್ಟಣ ತಾಲ್ಲೂಕಿನ ಕನ್ನಸಂದ್ರ ಗ್ರಾಮದ ಪ್ರಜೆಗಳು ಕೊಳವೆ ಭಾವಿಯಿಂದ ನೀರು ಪಡೆಯುತ್ತಿದ್ದಾರೆ ಎಂಬುದು ನಿಜವೇ ?

ಆ) ಈಗಿರುವ ನಿಯಮದ ಪ್ರಕಾರ ಎರಡು ಕೊಳವೆ ಬಾವಿಗಳ ಮಧ್ಯ ೬೦೦ ಅಡಿ ಅಂತರ ಇರಬೇಕೆಂಬುದು ನಿಜವೇ ?

ಇ) ನೀರಾವರಿಗೋಸ್ಕರ ಒಂದು ಕೊಳವೆ ಬಾವಿ ಹಾಲಿ ಇರುವ ಕೊಳವೆಬಾವಿಯಿಂದ ೫೦ ಅಡಿ ಒಳಗೆ ಕೊರೆದು ಎಲೆಕ್ಟ್ರಿಕ್ ಮೋಟಾರ್ ಕೂಡ್ರಿಸಿದ್ದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಈ) ಪ್ರಜೆಗಳ ಹಿತಾಸಕ್ತಿಯಲ್ಲಿ ಕೊಳವೆಬಾವಿಯನ್ನು ಮುಚ್ಚಲು ಶೀಘ್ರಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀ ಅಬ್ದುಲ್ ನಜೀರ್ ಸಾಬ್ (ಗ್ರಾಮೀಣಾಭಿವೃದ್ಧಿ, ವಸತಿ ಹಾಗೂ ವಕ್ಫ್ ಮಂತ್ರಿಗಳು).—

ಅ) ನಿಜ.

ಆ) ನಿಜ.

ಇ) ಕನ್ನಸಂದ್ರ ಗ್ರಾಮದ ಒಬ್ಬರು ಸ್ವಂತ ಜಮೀನಿನಲ್ಲಿ ನೀರಾವರಿಗೋಸ್ಕರ ಕೊಳವೆ ಬಾವಿಯನ್ನು ತೋಡಿಸಿದ್ದು ಅದು ಪಿಹೆಚ್‌ಇ ಕೊಳವೆ ಬಾವಿಯಿಂದ ಸುಮಾರು ೮೦ ಅಡಿ ದೂರವಲ್ಲಿ ಇರುವುದು ಸರ್ಕಾರದ ಗಮನಕ್ಕೆ ಬಂದಿದೆ. ಆದರೆ ಈ ಕೊಳವೆ ಬಾವಿಗ ಇನ್ನೂ ಎಲೆಕ್ಟ್ರಿಕ್ ಮೋಟಾರ್ ಕೂಡ್ರಿಸಿರುವುದಿಲ್ಲ.

ಈ) ನಿಯಮಗಳಿಗನುಸಾರವಾಗಿ ಕ್ರಮ ತೆಗೆದು ಕೊಳ್ಳಲಾಗುವುದು.

ತುಮ್ಮನಕಟ್ಟೆ ಗ್ರಾಮಕ್ಕೆ ಕುಡಿಯುವ ನೀರು ಪೂರೈಸುವ ಬಗ್ಗೆ

೮೫೨. ಶ್ರೀ ಕೆ. ಬಿ. ಕೋಳಿವಾಡ (ರಾಣೆಬೆನ್ನೂರು) ಮಾನ್ಯ ಗ್ರಾಮೀಣಾಭಿವೃದ್ಧಿ, ವಸತಿ ಮತ್ತು ವಕ್ಫ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಣೆಬೆನ್ನೂರು ತಾಲ್ಲೂಕಿನ ತುಮ್ಮನ ಕಟ್ಟೆ ಗ್ರಾಮಕ್ಕೆ ಕುಡಿಯುವ ನೀರು ಪೂರೈಸುವ ಯೋಜನೆಯಡಿಯಲ್ಲಿ ತುಂಗಭದ್ರಾ ನದಿಯ ನೀರನ್ನು ತರುವ ಕೆಲಸವು ಮುಗಿಯದೆ ಇರುವುದು ವಾಸ್ತವಿಕವೇ ?

ಆ) ಹಾಗಿದ್ದಲ್ಲಿ ನದಿಯ ದಡದ ಮೇಲೆ ಇನ್‌ಫಿಲ್‌ಟ್ರೇಶನ್ ಬಾವಿಯ ಕೆಲಸವನ್ನು ಪ್ರಾರಂಭಿಸದೆ ಇರಲು ಕಾರಣವೇನು ?

ಶ್ರೀ ಅಬ್ದುಲ್ ನಜೀರ್ ಸಾಬ್ (ಗ್ರಾಮೀಣಾಭಿವೃದ್ಧಿ, ವಸತಿ ಮತ್ತು ವಕ್ಫ್ ಮಂತ್ರಿಗಳು).—

ಅ) ಹೌದು

ಆ) ನದಿಯಲ್ಲಿ ಪ್ರವಾಹ ಬಂದಿದ್ದರ ಕಾರಣ ಮತ್ತು ತಳಹದಿಯ ಸಮಸ್ಯೆಯಿಂದ ಇನ್‌ಫಿಲ್‌ಟ್ರೇಶನ್ ಬಾವಿಯ ಕೆಲಸವನ್ನು ತೆಗೆದುಕೊಳ್ಳಲು ತಡವಾಯಿತು. ಆದರೂ ನೀರಾವರಿ ಪಂಪ್‌ಮಾಡಿ ನೀರು ಸರಬರಾಜು ಮಾಡಲಾಗುತ್ತಿದೆ. ಬಾವಿಯ ಕೆಲಸವನ್ನು ಕೂಡಲೇ ತೆಗೆದುಕೊಳ್ಳಲಾಗುವುದು